ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಮೂಡಬಿದಿರೆ

ಸಿಸಿ ನಂ.294/2018

ಚಾಸಾ-1 , ಪ್ರಾಸಾ -1

| | |
|---|---|
| ಹೆಸರು | ಸದಾಶಿವ ಆರ್ಚಾಯ |
| ತಂದೆಯ ಹೆಸರು | ಕೊರಗಪ್ಪ ಆರ್ಚಾಯ |
| ವಯಸ್ಸು | 54 ವರ್ಷ |
| ಕೆಲಸ | ಕಾರ್ಪೆಂಟರ್ |
| ವಾಸ | ಕಲ್ಲಬೆಟ್ಟು , ಕರಿಂಜೆ ಗ್ರಾಮ |
| ಪ್ರಮಾಣೀಕರಿಸಿದ ದಿನಾಂಕ | 07-08-2019 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಚಾಸಾ-2 ನನ್ನ ಹೆಂಡತಿ . ಚಾಸಾ-3 ನನ್ನ ಭಾವ. ದಿಃ 05-09-2017 ರಂದು ನಾನು ಎಂದಿನಂತೆ ಬೆಳಿಗ್ಗೆ 8-00 ಗಂಟೆಗೆ ಕೆಲಸಕ್ಕೆ ಹೋಗಿದ್ದೆ . ಮನೆಯಲ್ಲಿ ನನ್ನ ಹೆಂಡತಿ ಚಾಸಾ-2 ರವರು ಇದ್ದರು. ಸುಮಾರು 10-00 ಗಂಟೆಗೆ ನನ್ನ ಹೆಂಡತಿ ಮನೆಗೆ ಬೀಗ ಹಾಕಿ ಬೀಡಿ ಬ್ರಾಂಚ್‌ಗೆ ಹೋಗಿದ್ದರು. ಆಗ ಮನೆಯಲ್ಲಿ ಯಾರು ಇರಲಿಲ್ಲ. ಸುಮಾರು 11-00 ಗಂಟೆಗೆ ನನ್ನ ಹೆಂಡತಿ ಮನೆಗೆ ಬಂದು ನೋಡಲಾಗಿ , ಮನೆಯಲ್ಲಿ ಇದ್ದ ಕಪಾಟಿನೊಳಗೆ ಇದ್ದ ಚಿನ್ನದ ಹವಳದ ಸರ, ಚಿನ್ನದ ಮುತ್ತಿನ ಹಾರ ಮತ್ತು ಬಂಗಾರದ ಜೋಮಾಲೆ, ಬಂಗಾರದ ಮಗುವಿನ ಚೈನ್ ಹಾಗೂ ಎರಡು ಉಂಗುರುಗಳನ್ನು ತೆಗೆದುಕೊಂಡು ಹೋಗಿದ್ದರು. ನನ್ನ ಹೆಂಡತಿ ಮನೆಗೆ ಬೀಗ ಹಾಕಿ ಎಂದಿನಂತೆ ಮನೆಯ ಹೊರಗೆ ಇದ್ದ ಸ್ವಿಚ್ ಬೊರ್ಡಿನ ಮೇಲೆ ಮನೆಯ ಬೀಗದ ಕೈಯನ್ನು ಇಟ್ಟುಹೋಗಿದ್ದರು. ಯಾರೋ ಅದನ್ನು ಗಮನಿಸಿ ಮನೆ ಬೀಗವನ್ನು ತೆಗೆದು ಒಳಪ್ರವೇಶಿಸಿ , ಮನೆಯ ಕಪಾಟಿನ ಬಾಗಿಲನ್ನು ಮುರಿದು ಒಳಗೆ ಇದ್ದ ಮೇಲೆ ಹೇಳಿದ ಚಿನ್ನದ ಒಡವೆಗಳನ್ನು ತೆಗೆದುಕೊಂಡು ಹೋಗಿದ್ದರು. ಸದರಿ ವಿಷಯವನ್ನು ಒಂದು ಕಾರ್ಯಕ್ರಮಕ್ಕೆ ಹೋಗುವಾಗ ನನ್ನ ಹೆಂಡತಿಯನ್ನು ನಿನ್ನ ಒಡವೆಗಳು ಎಲ್ಲಿ ಎಂದು ಕೇಳಿದಾಗ , ಅವುಗಳು ಯಾರು ಕದ್ದಿರುವುದಾಗಿ ಸ್ವಲ್ಪ ದಿನಗಳ ನಂತರ ನನಗೆ ಹೃದಯ ಚಿಕಿತ್ಸೆಯಾಗಿದ್ದರಿಂದ ಹೇಳಿದ್ದರು. ನಾನು ಈಗ ಬಗ್ಗೆ ಪೊಲೀಸ್ ಠಾಣೆಗೆ ದೂರನ್ನು ಕೊಟ್ಟಿರುತ್ತೇನೆ. ಸಾಕ್ಷಿ ದೂರಿನಲ್ಲಿ ಇರುವ ತನ್ನ ಸಹಿಯನ್ನು ಗುರುತಿಸಿದ್ದರಿಂದ ಅದನ್ನು ನಿಪಿ-1 ಎಂದು , ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು

ಗುರುತಿಸಲಾಯಿತು. ನಾನು ದೂರು ಕೊಟ್ಟ ನಂತರ ಪೊಲೀಸರು ಬಂದು ಮನೆಯನ್ನು ಪರಿಶೀಲಿಸಿ ಸ್ಥಳ ಮಹಜರ್ ಮಾಡಿದರು. ಸಾಕ್ಷಿ ಮಹಜರ್ ನಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ , ಅದನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಾನು ದೂರು ಕೊಟ್ಟ ಎರಡು ದಿನಗಳ ನಂತರ ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಕರೆಯಿಸಿದರು. ಕಳುವಾದ ಬಂಗಾರವನ್ನು ಪೊಲೀಸರು ನನಗೆ ತೋರಿಸಿದರು. ಪೊಲೀಸರು ಕಳ್ಳತನ ಮಾಡಿದ ಕಳ್ಳನ್ನನ್ನು ಸಹ ಪೊಲೀಸರು ತೋರಿಸಿದರು. ಈ ದಿನ ನಾಯಾಲಯದ ಮುಂದೆ ಇರುವ ಆರೋಪಿಯೇ , ಆ ದಿನ ಪೊಲೀಸ್ ಠಾಣೆಯಲ್ಲಿ ಪೊಲೀಸರು ತೋರಿಸಿದ ಕಳ್ಳ. ಸಾಕ್ಷಿ ಫೋಟೋದಲ್ಲಿ ಇರುವ ಚಿನ್ನದ ಒಡವೆಗಳನ್ನು ನೋಡಿ ಗುರುತಿಸಿದ್ದರಿಂದ , ಸದರಿ ಫೋಟೋವನ್ನು ನಿಪಿ-3 ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ಎಸ್.ಎಸ್.ಡಿ ವಕೀಲರಿಂದಃ</u>

ಕಪಾಟಿನ ಬಾಗಿಲನ್ನು ಬೆಂಡ್ ಮಾಡಿ ತೆಗೆಯಲಾಗಿತ್ತು. ಕಳ್ಳತನವಾದ ದಿನವೇ ಕಪಾಟಿನ ಬಾಗಿಲು ಬೆಂಡ್ ಆಗಿರುವುದನ್ನು ನಾನು ನೋಡಿದೆ. ಮೂಡಬಿದ್ರೆ ಪೊಲೀಸರು ಕಳುವಾದ ದಿನವೇ ಬಂದು ಕಪಾಟಿನ ಬಾಗಿಲು ಬೆಂಡಾಗಿರುವುದನ್ನು ನೋಡಿ ಹೋಗಿದ್ದರು. ಮುಡಬಿದ್ರೆ ಪೊಲೀಸರು ಕಳುವಾದ ಸ್ವತ್ತುಗಳು ಸಿಕ್ಕಿದ ತಕ್ಷಣ ನಿಮಗೆ ಹೇಳುತ್ತೇವೆ , ಆಗ ನೀವು ಪೊಲೀಸ್ ಠಾಣೆಗೆ ಬಂದು ದೂರನ್ನು ಕೊಡಬೇಕೆಂದು ತಿಳಿಸಿದರು. ದಿಃ 17-11-2017 ರಂದು ಮುಡಬಿದ್ರೆ ಪೊಲೀಸರು ನನಗೆ ಕರೆ ಮಾಡಿ ಕಳ್ಳತನವಾದ ಸ್ವತ್ತುಗಳು ಸಿಕ್ಕಿವೆ ಎಂದು ತಿಳಿಸಿದರು. ನಾನು ಠಾಣೆಗೆ ಹೋದೆ ಠಾಣೆಯಲ್ಲಿ ಪೊಲೀಸರು ಸ್ವತ್ತುಗಳನ್ನು ತೋರಿಸಿದರು, ನಂತರ ದೂರನ್ನು ಪೊಲೀಸರೇ ಬರೆದರು. ಸದರಿ ದೂರಿಗೆ ನಾನು ಸಹಿಯನ್ನು ಹಾಕಿದೆ. ದೂರನ್ನು ಬರೆದ ದಿನವೇ ಪೊಲೀಸರು ಕಳ್ಳನನ್ನು ನನಗೆ ತೋರಿಸಿದರು. ಪೊಲೀಸ್ ಠಾಣೆಯಲ್ಲಿ ಕಪಾಟು ಬೆಂಡು ಆದ ಬಗ್ಗೆ ಮಹಜರ್ ನ್ನು ಬರೆದರು. ಕಳ್ಳನನ್ನು ತೋರಿಸಿದರು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಚಾಸಾ-1, ಫ್ರಾಸಾ -1

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ.

ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾ ದಂ.
ಮೂಡಬಿದಿರೆ